ಕರ್ನಾಟಕ ಸರ್ಕಾರ

ರಾಷ್ಟ್ರೀಯ ಸೇವಾ ಯೋಜನಾ ಕೋಶ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–12.

ಸಂಖ್ಯೆ:ಪಪೂಶಿಇ/ರಾಸೇಯೋ/ಸ್ವಾವಿಚಿಉ/80/2018–19 ದಿನಾಂಕ: 06.08.2018

**ಸುತ್ತೋಲೆ**

ವಿಷಯ : ಸ್ವಾಮಿ ವಿವೇಕಾನಂದರ ಚಿಕಾಗೊ ಉಪನ್ಯಾಸದ 125ನೇ ವರ್ಷಾಚರಣೆಯನ್ನು ಆಚರಿಸುವ ಬಗ್ಗೆ

ಉಲ್ಲೇಖ : 1.ಯುಸೇಇ/ರಾಸೇಯೋ/2018–19/192

2.ಯುಸಕ್ರೀಇ/ಯುಸೇ/ಸ್ವಾಕಾ/15/18–19

***

ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಸ್ವಾಮಿ ವಿವೇಕಾನಂದರು 1893ರಲ್ಲಿ ಚಿಕಾಗೊ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿ ಭಾರತದ ತತ್ವಾದರ್ಶಗಳನ್ನು ಹೃದಯಸ್ಪರ್ಶಿಯಾಗಿ ಅಲ್ಲಿ ಹಾಜರಿದ್ದ ಪ್ರತಿನಿಧಿಗಳಿಗೆ ತಿಳಿಸಿ ಜಗತ್ಪ್ರಸಿದ್ಧವಾದ ದಿನ 11ನೇ ಸೆಪ್ಟಂಬರ್. ಈ ಐತಿಹಾಸಿಕ ಭಾಷಣ ನೀಡಿ 11ನೇ ಸೆಪ್ಟಂಬರ್ 2018ಕ್ಕೆ 125 ವರ್ಷಗಳಾಗಿದ್ದು, 11ನೇ ಸೆಪ್ಟಂಬರ್ 2018 ರಿಂದ 11ನೇ ಸೆಪ್ಟಂಬರ್ 2019 ರವರೆಗೆ ವಾರ್ಷಿಕೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ಸರ್ಕಾರವು ನಿರ್ಧರಿಸಿದೆ. ಈ ಕೆಳಕಂಡ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವಂತೆ ಸೂಚಿಸಿದೆ.

ಸ್ವಾಮಿ ವಿವೇಕಾನಂದರ ವಿಚಾರಸಂಕಿರಣ, ಜಾಗೃತಿ ಜಾಥಾ ಕಾರ್ಯಕ್ರಮಗಳು, ಯುವಜನರಲ್ಲಿ ಅರಿವು ಮೂಡಿಸುವ ಬಗ್ಗೆ ಭಾಷಣ, ಚರ್ಚಾಕೂಟದಂತಹ ಕಾರ್ಯಕ್ರಮಗಳನ್ನು ರೂಪಿಸಿ ಸಮಾಜದಲ್ಲಿ ಏಕತೆಯ ಭಾವನೆಯನ್ನು ಪಸರಿಸಲು ಇಲಾಖೆಗಳ ಸಮನ್ವಯದೊಂದಿಗೆ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಘಟಕ ಹೊಂದಿರುವ ಕಾಲೇಜುಗಳು ಸಕ್ರೀಯವಾಗಿ ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳಬೇಕೆಂದು, ಪ್ರಾಚಾರ್ಯರು ಸೂಕ್ತ ಕ್ರಮ ಕೈಗೊಳ್ಳಲು ಈ ಮೂಲಕ ಇಲಾಖೆಯಿಂದ ಆದೇಶಿಸಿರುತ್ತಾರೆ.

ಇಂತಿ ತಮ್ಮ ವಿಶ್ವಾಸಿ

Gayathri Reddy P.R

ಎನ್.ಎಸ್.ಎಸ್. ಸಂಯೋಜನಾಧಿಕಾರಿಗಳು

ಪದವಿ ಪೂರ್ವ ಶಿಕ್ಷಣ ಇಲಾಖೆ

ಬೆಂಗಳೂರು